# ದೊಡ್ಡ ಕೆಲಸ ಬಿಟ್ಟು
# ರೈತರಿಗೆ ದಾರಿ
## ತೋರಿದ ಮೇಷ್ಟ್ರು





## ಕೋಲಾರದಲ್ಲಿ ಕ್ರಾಂತಿ ಮಾಡಿದ
### ಹುಲ್ಲುನಾಚೇಗೌಡರು

• ಜಿ. ಸತ್ಯರಾಜ್

ಒಂದು ಕಡೆ ನೀರಿನ ಅಭಾವ, ಸದಾ ಕಾಡುವ ರೋಗಗಳು, ಸೂಕ್ತ ತಿಳುವಳಿಕೆಯ ಕೊರತೆಯಾದರೆ ಇನ್ನೊಂದು ಕಡೆ ಆಧುನಿಕ ಕೃಷಿ ಪದ್ಧತಿ, ಮಾರುಕಟ್ಟೆಗಳ ಹೊಡೆತಕ್ಕೆ ಸಿಲುಕಿ ನಡುಗುತ್ತಿರುವ ರೈತರ ಪಾಲಿಗೆ ಇಲ್ಲೊಬ್ಬ ಬಂಧುವಿದ್ದಾರೆ. ಅವರೇ ಡಾ. ಕೆ.ಆರ್. ಹುಲ್ಲುನಾಚೇಗೌಡ.

'ಒಂದು ಕಾಲದಲ್ಲಿ ಕೋಲಾರ ರೇಷ್ಮೆ ಜಿಲ್ಲೆಯೆಂದೇ ಖ್ಯಾತಿ ಪಡೆದಿತ್ತು. ಲಕ್ಷಾಂತರ ಕುಟುಂಬಗಳು ರೇಷ್ಮೆ ಕೃಷಿಯಿಂದ ಬದುಕು ಸಾಗಿಸುತ್ತಿದ್ದವು. ಇದೆಲ್ಲವನ್ನೂ ನಾನು ಕಣ್ಣಾರೆ ಕಂಡು ಬೆಳೆದವನು. ಆದರೆ ದಿನ ಕಳೆದಂತೆ ನೀರಿನ ಬವಣೆಯಿಂದ ಅಂತರ್ಜಲ ಮಟ್ಟ ಕುಸಿಯುತ್ತಾ ಸಾಗಿತು. ಬೇರೆ ದಾರಿ ಕಾಣದೆ ರೈತರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೋರ್‌ವೆಲ್ ಕೊರೆಸಲು ಶುರುವಿಟ್ಟರು. ಆದರೆ ಇದರಿಂದ ದೀರ್ಘ ಕಾಲದಲ್ಲಿ ದೊರೆತ ಫಲವೆಂದರೆ ಸಾಲ. ಇದೆಲ್ಲದರಿಂದ ಕಂಗೆಟ್ಟ ಹಲವರು ಇಂದು ರೇಷ್ಮೆ ಬೆಳೆಯನ್ನೇ ಕೈ ಬಿಟ್ಟಿದ್ದಾರೆ. ಇನ್ನೂ ಕೆಲವರು ಕೃಷಿ ಜಮೀನುಗಳನ್ನು ರಿಯಲ್ ಎಸ್ಟೇಟ್ ಆಸಾಮಿಗಳಿಗೆ ಕಡಿಮೆ ಬೆಲೆಗೆ ಮಾರಿಕೊಂಡು ನೆಲೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಇಷ್ಟೆಲ್ಲಾ ಬದಲಾವಣೆಗಳು ನನ್ನ ಕಣ್ಣ ಮುಂದೆಯೇ ನಡೆಯುತ್ತಿರುವಾಗ ಕೃಷಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಉಪನ್ಯಾಸಕನಾಗಿರುವ ನಾನು ನಾಲ್ಕು ಗೋಡೆಗಳಿಗೆ ಸೀಮಿತವಾಗಬಾರದು ಎಂದು ನಿರ್ಧಾರ ಮಾಡಿಕೊಂಡದ್ದೇ ತಡ ಸೀದಾ ಕೆಲಸಕ್ಕೆ ರಾಜೀನಾಮೆ ನೀಡಿ ಖುದ್ದು ರೈತರ ಜಮೀನುಗಳ ಬಳಿಯೇ ತೆರಳಿ ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದೇನೆ' ಎನ್ನುತ್ತಾರೆ ಹುಲ್ಲುನಾಚೇಗೌಡರು.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಇಂದು ಕುಡಿಯುವ ಗಂಭೀರ ಸಮಸ್ಯೆ ಎದುರಿಸುತ್ತಿವೆ. ಇನ್ನು ಕೃಷಿಗೆ ನೀರು ಸಿಗುವುದು ದೂರದ ಮಾತು. ಆದರೆ ವರ್ಷದ ಕೆಲ ಸಮಯದಲ್ಲಿಯೇ ಸಿಗುವ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಮಾಡಬೇಕು. ಸೂಕ್ತ ಗೊಬ್ಬರ, ಮಣ್ಣಿನ ಸಂರಕ್ಷಣೆ, ವೈಜ್ಞಾನಿಕ ಕೃಷಿ ಪದ್ಧತಿಯಿಂದ ಲಾಭದತ್ತ ಹೆಜ್ಜೆ ಹಾಕಬೇಕು. ಇದು ಸಾಧ್ಯವಾಗಬೇಕಾದರೆ ಅವರ ಬಳಿಯೇ ತೆರಳಿ ಅರಿವು ಮೂಡಿಸಬೇಕು ಎಂದುಕೊಂಡದ್ದೇ ತಡ ಮೊದಲು ಸ್ಥಳೀಯ ಪ್ರದೇಶಗಳಿಗೆ ತೆರಳಿ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಉಚಿತವಾಗಿ ತಿಳಿಸಿಕೊಡುತ್ತಿದ್ದಾರೆ.

**ರೇಷ್ಮೆಗೆ ಮರುಜೀವ:** ಒಣ ಬೇಸಾಯದ ಮೂಲಕ ನೀರಿಲ್ಲದೆ ಮಳೆ ನೀರಿನಲ್ಲಿಯೇ ರೇಷ್ಮೆ ಕೃಷಿ ಮಾಡಬಹುದು. ಮರಗಡ್ಡಿ ಮಾದರಿಯಲ್ಲಿ ಒಂದು ಎಕರೆ ಜಾಗದಲ್ಲಿಯೂ ಹಿಪ್ಪುನೇರಳೆ ಬೆಳೆದು ರೇಷ್ಮೆ ಕೃಷಿ ಮಾಡಿ ತಿಂಗಳಿಗೆ 50 ಸಾವಿರ ರು.ವರೆಗೆ ಆದಾಯ ಗಳಿಸಬಹುದು ಎನ್ನುವುದನ್ನು ತಿಳಿಸುತ್ತಾ ಬರುತ್ತಿದ್ದಾರೆ. ಇವರ ಸಂಶೋಧನಾ ಮಾದರಿಯ ರೇಷ್ಮೆ ಕೃಷಿ ಈ ಪ್ರದೇಶಗಳಿಗೆ ವರದಾನವಾಗಿದೆ. ರೈತರಿಗೆ ಮತ್ತು ಈ ಭಾಗದ ರೇಷ್ಮೆ ಕೃಷಿಗೆ ಪುನರ್ಜನ್ಮ ಬಂದಂತಾಗಿದೆ. ಇದರ ಜತೆಗೆ ಶ್ರೀಗಂಧದ ಮರ ಬೆಳೆಸುವ ವಿಧಾನದ ಬಗ್ಗೆಯೂ ಹೇಳಿ ಕೊಟ್ಟು ಆರ್ಥಿಕವಾಗಿ ಸುಧಾರಣೆಗೊಳ್ಳುವ ಸುಲಭೋಪಾಯಗಳನ್ನು ಸೂಚಿಸುತ್ತಿದ್ದಾರೆ. ಬರೇ ರೇಷ್ಮೆ ಅಷ್ಟೇ ಅಲ್ಲ ಕಬ್ಬು, ದಾಳಿಂಬೆ, ಹತ್ತಿ, ಅರಿಶಿಣ, ಮಾವು, ಬಾಳೆ, ಅಡಿಕೆ, ಸಪೋಟಾ, ನಿಂಬೆ ಎಲೆಬಳ್ಳಿ, ಮುಂತಾದ ಬಹುವಾರ್ಷಿಕ ಬೆಳೆಗಳನ್ನು ಸಾವಯವ ಪದ್ಧತಿ ಅನುಸರಿಸಿ ಹೇಗೆ ಲಾಭದಾಯಕವಾಗಿ ನಿರ್ವಹಿಸಲು ಸಾಧ್ಯವಿದೆ ಎಂಬುದನ್ನು ತೋರಿಸಿಕೊಡುತ್ತಿದ್ದಾರೆ.

**ಡಾ. ಸಾಯಿಲ್:** ಮಣ್ಣಿನ ಫಲವತ್ತತೆ ಹೆಚ್ಚಿಸಲು ಮತ್ತು ಕಳೆದು ಹೋಗಿರುವ ಮಣ್ಣಿನ ಸತ್ವವನ್ನು ಮರಳಿ ಪಡೆಯಲು ಡಾ. ಸಾಯಿಲ್ ಎಂಬ ಜೈವಿಕ ಪ್ರಚೋದಕ ಸಸ್ಯ ಆಹಾರವನ್ನೂ ಇವರು ಅಭಿವೃದ್ಧಿಪಡಿಸಿ ರೈತರಿಗೆ ಕಡಿಮೆ ದರದಲ್ಲಿ ನೀಡುತ್ತಿದ್ದಾರೆ. 'ಮಣ್ಣಿನಲ್ಲಿ ಕಣ್ಣಿಗೆ ಕಾಣದ ಕೋಟ್ಯಾಂತರ ಸೂಕ್ಷ್ಮಾಣು ಜೀವಿಗಳಿರುತ್ತವೆ. ಒಂದು ಗ್ರಾಂ. ಆರೋಗ್ಯ ಪೂರ್ಣ ಮಣ್ಣಿನಲ್ಲಿ 2 ಕೋಟಿ 90 ಲಕ್ಷ ಸೂಕ್ಷ್ಮಾಣು ಜೀವಿಗಳಿರಬೇಕು.

ನಾವು ಉಸಿರಾಡಲು ಗಾಳಿ ಹೇಗೆ ಮುಖ್ಯವೋ ಹಾಗೆಯೇ ಮಣ್ಣಿಗೆ ಸೂಕ್ಷ್ಮಾಣು ಜೀವಿಗಳು ಅಷ್ಟೇ ಮುಖ್ಯ, ಆದರೆ ರಾಸಾಯನಿಕ ಬಳಕೆಯಿಂದ ಈ ಜೀವ ಸತ್ವಗಳು ಸತ್ತು ಹೋಗಿ ಮಣ್ಣಿನಲ್ಲಿ ಫಲವತ್ತತೆ ಇಲ್ಲದಂತಾಗಿ ಬೆಳೆಗಳು ಹಾಳಾಗುತ್ತಿವೆ. ನಿರೀಕ್ಷಿತ ಮಟ್ಟದಲ್ಲಿ ಇಳುವರಿ ಕಾಣಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸೂಕ್ತ ಗೊಬ್ಬರಗಳ ಬಳಕೆಯೂ ಕೃಷಿಯ ಬಹು ಮುಖ್ಯ ಭಾಗ ಎನ್ನುವ ಡಾ. ಹುಲ್ಲುನಾಚೇಗೌಡರು ಇದಕ್ಕಾಗಿಯೇ ಡಾ. ಸಾಯಿಲ್‌ನ ಮಹತ್ವವನ್ನು ತಿಳಿಸುತ್ತಿದ್ದಾರೆ.

ಹುಲ್ಲುನಾಚೇಗೌಡರ ಹೊಸಬಗೆಯ ವಿಧಾನಗಳನ್ನು ಅನುಸರಿಸುತ್ತಿರುವ ರೈತರು ತಮ್ಮ 40 ವರ್ಷದ ಅನುಭವದಲ್ಲಿ ಇಂತಹ ಬೆಳೆಯನ್ನು ಎಂದೂ ಕಂಡಿರಲಿಲ್ಲ ಎಂದು ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಹೀಗೆ ನಷ್ಟದಲ್ಲಿದ್ದ ಕೃಷಿಕರ ಮೊಗದಲ್ಲಿ ಸಂತಸ ಮೂಡಿಸುವಲ್ಲಿ ಶ್ರಮಿಸುತ್ತಿರುವ ಡಾ. ಹುಲ್ಲುನಾಚೇಗೌಡರನ್ನು ನೀವೂ ಮಾತನಾಡಿಸಬಹುದು. ದೂ- 9538220005

### ಕೃಷಿ ಶಿಕ್ಷಣ ಅಭಿಯಾನ

ರಾಸಾಯನಿಕ ಗೊಬ್ಬರಗಳು ಮತ್ತು ಔಷಧಿಗಳ ವಿಪರೀತ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತಿರುವುದಕ್ಕೂ ಹಲವು ತಂತ್ರೋಪಾಯಗಳ ಮೂಲಕ ರೈತರಲ್ಲಿ ತಿಳುವಳಿಕೆ ನೀಡುತ್ತಾ ಬರುತ್ತಿದ್ದಾರೆ. ತಮ್ಮದೇ ಖರ್ಚಿನಲ್ಲಿ ರಾಜ್ಯದ ಮೂಲೆ ಮೂಲೆಗೆ ಸಂಚರಿಸಿ ರೈತರನ್ನು ಸಂಪರ್ಕಿಸಿ ಸಾವಯವ ಕೃಷಿ ಮತ್ತು ಸುಲಭ ರೀತಿಯಲ್ಲಿ ಹೇಗೆ ರೇಷ್ಮೆ ಕೃಷಿ ಮಾಡಬಹುದು ಎಂಬುದರ ಅರಿವು ಮೂಡಿಸುತ್ತಿದ್ದಾರೆ. ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರದ ಗಡಿ ಭಾಗಕ್ಕೂ ಹೋಗಿ ರೈತ ಸಂಪರ್ಕ ಸಭೆಗಳನ್ನು ಕರೆದು ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಕುರಿತು ಪ್ರಾಯೋಗಿಕ ತರಬೇತಿ ನೀಡುತ್ತಾ ಬಂದಿರುವುದು ಇವರ ಸೇವಾ ಸ್ಫೂರ್ತಿಗೆ ಸಾಕ್ಷಿಯಾಗಿದೆ. ಕಳೆದ ಐದು ವರ್ಷಗಳಲ್ಲಿ ಸಸ್ಯ ಸಂಜೀವಿನಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಹೆಸರಿನಲ್ಲಿ ಸಮಗ್ರ ಸುಸ್ಥಿರ ಸಾವಯವ ಕೃಷಿ ಶಿಕ್ಷಣ ಅಭಿಯಾನವನ್ನೂ ಜೊತೆಜೊತೆಯಲ್ಲಿಯೇ ನಡೆಸಿಕೊಂಡು ಬರುತ್ತಿದ್ದಾರೆ. ಸುಮಾರು 800ಕ್ಕೂ ಹೆಚ್ಚು ರೈತ ಸಭೆಗಳನ್ನು ಕರೆದು ಸಾವಯವ ಕೃಷಿ ಬಗ್ಗೆ ಮಾರ್ಗೋಪಾಯಗಳನ್ನು ನೀಡುತ್ತಿದ್ದಾರೆ ಕೃಷಿಯಲ್ಲಿ ಬದುಕೇ ಇಲ್ಲ ಎಂದು ಕೈಚೆಲ್ಲುತ್ತಾ ನಿರಾಶೆಯಲ್ಲಿರುವವರಲ್ಲಿ ಧೈರ್ಯ ತುಂಬುತ್ತಾ ಬದುಕು ಕಟ್ಟಿಕೊಡುತ್ತಿದ್ದಾರೆ.